**ದಿನಾಂಕಃ 26/11/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: 2 ರಿಂದ 6 ಪ್ರತಿವಾದಿಗಳ ಪರ ಶ್ರೀ. ಎನ್ ಎನ್ ಎಸ್ ವಕೀಲರಿಂದಃ**

1. ಶಾಶ್ವತ ನಿರ್ಬಂಧಕಾಜ್ಞೆಗೋಸ್ಕರ ಈ ದಾವೆ ಹೂಡಿದ್ದೇವೆ. ನನ್ನ ಗಂಡನ ಹೆಸರಿನಿಂದ ನನ್ನ ಹೆಸರಿಗೆ ದಾವಾ ಸ್ವತ್ತು ಬಂದಿದೆ. ನನ್ನ ಗಂಡನಿಗೆ ಬರವಣಿಗೆಯ ಹೇಳಿಕೆಯಿಂದ ದಾವಾ ಸ್ವತ್ತು ಅವರ ಹೆಸರಿಗೆ ಬಂದಿದೆ. ಯಾರು ಬರವಣಿಗೆ ಹೇಳಿಕೆ ನೀಡಿದ್ದರು ಎಂದು ಗೊತ್ತಿಲ್ಲ. ಯಾವ ಸರ್ವೆ ನಂಬರಿಗೆ ಹೇಳಿಕೆ ನೀಡಿದ್ದರು ಎಂದು ಗೊತ್ತಿಲ್ಲ.

2. ಪುಟ್ಟಯ್ಯ ಗೊತ್ತಿಲ್ಲ. ಬಸವಯ್ಯರವರು ನನ್ನ ಗಂಡನ ತಂದೆ. ಪುಟ್ಟಯ್ಯ ರವರ ಬಸವಯ್ಯ ರವರ ತಂದೆ ಎಂದರೆ ನನಗೆ ಗೊತ್ತಿಲ್ಲ. ಪುಟ್ಟಯ್ಯ ರವರು ಬಸವನಹಳ್ಳಿ ಗ್ರಾಮದವರು ಎಂದರೆ ನನಗೆ ಗೊತ್ತಿಲ್ಲ. ನನ್ನ ಮಾವ ಬಸವಯ್ಯ ಸಹ ಬಸವನಹಳ್ಳಿ ಗ್ರಾಮದವರು ಎಂದರೆ ನನಗೆ ಗೊತ್ತಿಲ್ಲ.

3. ಈ ದಾವೆಯನ್ನು ಸ. ನಂ.53/1 ಕ್ಕೆ ಹೂಡಿದ್ದೇವೆ. ಅದರ ಚಕ್ಕುಬಂದಿ ಗೊತ್ತಿಲ್ಲ. ಲಕ್ಕಯ್ಯ ರವರು ಗೊತ್ತಿಲ್ಲ. ಅವರ ಮಕ್ಕಳ ಬಗ್ಗೆ ಗೊತ್ತಿಲ್ಲ. ರಾಮು, ಕೃಷ್ಣ, ಹರೀಶ ರವರು ಲಕ್ಕಯ್ಯ ರವರ ಮಗ ಎಂದರೆ ಗೊತ್ತು ಎಂದು ನುಡಿಯುತ್ತಾರೆ. ಮಮತ ಮತ್ತು ಸವಿತ ರವರು ಲಕ್ಕಯ್ಯ ರವರ ಸೊಸೆ ಎಂದರೆ ಸರಿ. 2 ರಿಂದ 4 ನೇ ಪ್ರತಿವಾದಿಯ ತಾತನ ಹೆಸರು ಕರಿಯಯ್ಯ ಎಂದರೆ ನನಗೆ ಗೊತ್ತಿಲ್ಲ. ಕರಿಯಯ್ಯ ರವರು ದಿಃ 10.05.1949 ರಂದು ದಾವಾ ಸ್ವತ್ತು ಅನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಕರಿಯ ಮತ್ತು ಮರಿ ಹೈದ ರವರು 1949 ರ ಕ್ರಯಪತ್ರದ ಮುಖಾಂತರ ದಾವಾ ಸ್ವತ್ತುನ ಸ. ನಂಬರಿನಲ್ಲಿ 6 ಎಕರೆ 2 ಗುಂಟೆ ಜಮೀನನ್ನು ಖರೀದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನ ಪೈಕಿ 2 ರಿಂದ 4 ನೇ ಪ್ರತಿವಾದಿಗಳ ತಾತರವರಿಗೆ 3 ಎಕರೆ 3 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಗೊತ್ತಿಲ್ಲ. ಆ ಜಮೀನಿನಲ್ಲಿ 2 ನೇ ಪ್ರತಿವಾದಿಗೆ 2 ಎಕರೆ

3 ಗುಂಟೆ ಖಾತೆ ಆಗಿದೆ ಎಂದರೆ ಸರಿಯಲ್ಲ. ಉಳಿಕೆ 1 ಎಕರೆ ಜಮೀನು ಪ್ರತಿವಾದಿಗಳ ಜಂಟಿ ಸ್ವಾಧೀನದಲ್ಲಿರುತ್ತದೆ ಎಂದರೆ ಸರಿಯಲ್ಲ.

4. ದಾವಾ ಸ್ವತ್ತು ಅನ್ನು ನನ್ನ ಗಂಡನಾಗಲೀ, ನನ್ನ ಮಾವನಾಗಲೀ ಖರೀದಿಸಿದ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ನನ್ನ ಗಂಡನಿಗೆ ಪಿತ್ರಾರ್ಜಿತ ಸ್ವತ್ತು ಎಂದು ಕಾಣಿಸುವ ದಾಖಲೆ ನೋಡಿಲ್ಲ. ಸದರಿ ದಾಖಲೆಯನ್ನು ಹಾಜರುಪಡಿಸಿಲ್ಲ. ಸದರಿ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇಲ್ಲ. ದಾವಾ ಸ್ವತ್ತು ಅನ್ನು ಲಪಟಾಯಿಸಲು ನಾನು ಮತ್ತು ನನ್ನ ಗಂಡ ಸುಳ್ಳು ದಾಖಲೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುನ ಮೇಲೆ ಒಡೆತನ ಮತ್ತು ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಲಕ್ಕಯ್ಯ ಮತ್ತು ಕರಿಯಾ ರವರಿಗೆ ನನ್ನ ಗಂಡ ಸಂಬಂಧಿಕರಾಗಿದ್ದಾರೆ. ಯಾವ ರೀತಿಯ ಸಂಬಂಧ ಎಂದು ಗೊತ್ತಿಲ್ಲ. ಸಂಬಂಧ ಎಂದು ತೋರಿಸಲು ವಂಶವೃಕ್ಷ ಹಾಜರುಪಡಿಸಿಲ್ಲ. ದಾವಾ ಸ್ವತ್ತು ನಲ್ಲಿ ನಾವು ಸಾವಧೀನ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳೇ ವ್ಯವಸಾಯ ಮಾಡುತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ನೀಡಲು ನಕಲಿ ದಾಖಲೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ಹೆಸರಿಗೆ ಬರೆದು ಕೊಡಲು ನನ್ನ ಗಂಡನಿಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ಲಕ್ಕಯ್ಯ ಮತ್ತು ಕರಿಯಾ ರವರು ಈಗ ಮರಣಗೊಂಡಿದ್ದಾರೆ. ಅವರು ಮರಣ ಗೊಂಡ ನಂತರ 2 ರಿಂದ 6 ನೇ ಪ್ರತಿವಾದಿಗಳು ದಾವಾ ಸ್ವತ್ತುನಲ್ಲಿ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ನಾವು ಲಕ್ಕಯ್ಯ ಮತ್ತು ಕರಿಯಾ ರವರ ವಂಶಸ್ಥರಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: 1 ನೇ ಪ್ರತಿವಾದಿ ಪರ ಶ್ರೀ. ಬಿ ಜೆ ಎಂ ವಕೀಲರಿಂದಃ</u>**

ಮೊದಲು 1 ನೇ ಪ್ರತಿವಾದಿ ಪಿ ಡಿ ಓ ಆಗಿ ಕೆಲಸ ಮಾಡುತ್ತಿದ್ದರು. ಈಗ ನಿವೃತ್ತಿ ಆಗಿದ್ದಾರೆ. ಈ ದಾವೆ ಹೂಡುವಾಗ 1ನೇ ಪ್ರತಿವಾದಿ ಗೌಡಗೆರೆಯಲ್ಲಿ ಕೆಲಸ ಮಾಡುತ್ತಿದ್ದರು. ಆ ಸಮಯದಲ್ಲಿ 1ನೇ ಪ್ರತಿವಾದಿ ಗೌಡಗೆರೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ಅವರು ಬಾರಸೆ ಗ್ರಾಮದಲ್ಲಿದ್ದರು ಎಂದು ನುಡಿಯುತ್ತಾರೆ. 1ನೇ

ಪ್ರತಿವಾದಿಯ ಹೆಂಡತಿಯ ಹೆಸರು ಲತ. ಅಕ್ರಮಕೂಟ ಮಾಡಿ ತೊಂದರೆ ನೀಡಿದ ದಿನಾಂಕವನ್ನು ಮರೆತಿದ್ದೇನೆ. ನಾನು ಠಾಣೆಯಲ್ಲಿ ದೂರು ನೀಡಿದ್ದೆ, ಅದಕ್ಕೆ ಠಾಣೆಯಲ್ಲಿ ರಾಜೀ ಮಾಡಿದ್ದರು. ದೂರು ನೀಡಿದ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ಯಾವುದೇ ದೂರು ನೀಡದಿದ್ದರೂ ನೀಡಿದ್ದೇನೆ ಎಂದು ಸುಳ್ಳು ಅಂಶ ಬರೆಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಯಾವುದೇ ತೊಂರೆ ನೀಡದಿದ್ದರೂ ಸುಳ್ಳು ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**